ರಾಜ್ಯ ವಿದ್ಯುತ್ ಪ್ರಸರಣ ನಿಗಮಕ್ಕೆ ಬರಬೇಕಾದ ಬಾಕಿ

4528 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ವಿದ್ಯುತ್ ಪ್ರಸರಣ ನಿಗಮಕ್ಕೆ ರೈತರು ಅರೆ ಸರ್ಕಾರ ಸಂಸ್ಥೆ ಹಾಗೂ ಖಾಸಗೀಯವರಿಂದ ಬರಬೇಕಾದ ವಿದ್ಯುತ್ ಬಾಕಿ ಹಣ ಎಷ್ಟು?

ಆ) ಈ ಬಾಕಿ ಹಣವನ್ನು ನವೆಂಬರ್ 30ರೊಳಗೆ ಪಾವತಿ ಮಾಡಿದರೆ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆಯೇ?

ಇ) ಇಲ್ಲಿಯವರೆಗೆ ಎಷ್ಟು ಬಾಕಿ ಹಣ ಪಾವತಿಯಾಗಿದೆ?

ಈ) ಬಡ್ಡಿ ಮನ್ನಾ ಅವಧಿಯನ್ನು ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ದಿನಾಂಕ 30.6.2000ದ ಅಂತ್ಯಕ್ಕೆ ರೈತರು, ಅರೆ ಸರ್ಕಾರಿ ಸಂಸ್ಥೆ ಹಾಗೂ ಖಾಸಗಿಯವರಿಂದ ಬರಬೇಕಾಗಿರುವ ಬಾಕಿಯ ಒಟ್ಟು ಮೊತ್ತ 1163.02 ಕೋಟಿ ರೂ.ಗಳು.

ಆ) ಈ ಕೆಳಕಂಡ ವರ್ಗಗಳ ಗ್ರಾಹಕರು ದಿನಾಂಕ 30.11.2000ದೊಳಗೆ ಅಸಲನ್ನು ಪೂರ್ಣವಾಗಿ ಪಾವತಿ ಮಾಡಿದರೆ, ಬಡ್ಡಿಯನ್ನು ಮನ್ನಾ ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

1. ನೀರಾವರಿ ಪಂಪ್‌ಸೆಟ್ಟುಗಳು.
2. ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳು.
3. ರಾಜ್ಯ/ಕೇಂದ್ರ ಸರ್ಕಾರದ ಸಂಸ್ಥೆಗಳು ಅಂದರೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಲೋಕೋಪಯೋಗಿ ಇಲಾಖೆ, ಏತ ನೀರಾವರಿ ಯೋಜನೆ, ಕುಡಿಯುವ ನೀರಿನ ಸ್ಥಾವರಗಳು (ಪಿ.ಹೆಚ್.ಇ.) ಇಲಾಖೆ, ಗೃಹ ಮಂಡಳಿ ಮತ್ತು ಇತರ ಸಂಸ್ಥೆಗಳು.
4. ಸಹಕಾರ ಸಂಸ್ಥೆಗಳು

ಇ) ಈ ಮೇಲಿನ ವರ್ಗಗಳ ವಿದ್ಯುತ್ ಸ್ಥಾವರಗಳಿಗೆ ಬಡ್ಡಿಯನ್ನು ಮನ್ನಾ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಿಗಮವು ದಿನಾಂಕ 21.10.2000ದಂದು ತನ್ನ ಆದೇಶವನ್ನು ಹೊರಡಿಸಿರುವುದರಿಂದ, ವಸೂಲಿಯಾಗಿರುವ ಬಾಕಿ ಹಣದ ವಿವರಗಳನ್ನು ಇನ್ನೂ ಪಡೆಯಬೇಕಾಗಿದ್ದು, ಪ್ರಸ್ತುತ ಲಭ್ಯವಿರುವುದಿಲ್ಲ.

ಈ) ಬಡ್ಡಿ ಮನ್ನಾದ ಅವಧಿಯನ್ನು ವಿಸ್ತರಿಸುವ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.